ಚಾಲಾಕಿಯ ಜೊತೆ ಡಿನ್ನರ್ ಪಾರ್ಟಿಯನ್ನು ಪರಮಾನಂದ ಮೊದಲೆ ತಿಳಿಸಿ ಫಿಕ್ಸ್ ಮಾಡಿಸಿದ್ದ. ನಮಗೂ ಕೂತೂಹಲವಿತ್ತು. ಆ ರಿಯಲ್ ಎಸ್ಟೇಟ್ ಮಾಲೀಕನ ಬಗ್ಗೆ ಪರಮಾನಂದ ವಿವರವಾಗಿ ಹೇಳಿದ್ದ. ಅವನೊಬ್ಬ ಜೀನಿಯಸ್. ಗ್ರೀಕ್ ಮತ್ತು ರೋಮ್‌ಭಾಷೆಗಳನ್ನು ಕಲಿತಿದ್ದ ಎಂದ ಮೇಲೆ ಹೆಚ್ಚಿಗೆ ಹೇಳಬೇಕಾಗಿದ್ದಿಲ್ಲ. ಪ್ರಪಂಚವನ್ನೆ ಸುತ್ತಿದ್ದ. ಆ ಕಾಲದ ಪಾಳೆಯಗಾರರ ಮನೆತನದ ಆತ ಉನ್ನತ ಶಿಕ್ಷಣಕ್ಕೆಂದು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಓದಿ ಅತ್ಯಂತ ಪ್ರತಿಭಾವಂತನೆಂದು ಡಾಕ್ಟರೇಟ್ ಪದವಿ ಪಡೆದು ಅಲ್ಲಿನ ಎಲ್ಲ ತರದ ಸುಖಗಳಲ್ಲಿ ಮಿಂದು ಸಾಕಾಗಿ ವಾಪಸ್ಸು ತಾಯಿ ನಾಡಿಗೆ ಬಂದು ಗ್ರಾನೈಟ್ ಕ್ವಾರಿಗಳ ಮಾಲೀಕನಾಗಿ ಬೆಳಗಾಗೋದರಲ್ಲಿ ಅತಿ ಶ್ರೀಮಂತನಾಗಿ ರಾಜಕೀಯ ಪಕ್ಷಗಳಿಗೆ ಉದಾರವಾಗಿ ರಾಜಕೀಯ ಪಾಠ ಮಾಡಿ ಲೆಕ್ಕವಿಲ್ಲದಷ್ಟು ಹಣ ನೀಡುತ್ತಿದ್ದ. ಅವನ ಪೂರ್ವಿಕರು ಹಿಂದೆ ಮೈಸೂರಿನ ರಾಜರ ಕಾಲದಲ್ಲಿ ಜನಪ್ರತಿನಿಧಿಗಳಾಗಿದ್ದರಂತೆ. ಅಂತಹ ದಾಖಲೆಗಳಿಗೆ ಅವನ ಬಳಿ ಲೆಕ್ಕವೇ ಇಲ್ಲ. ಅವನ ಜೊತೆ ಒಂದು ಬೆಳದಿಂಗಳ ರಾತ್ರಿ ಅಮಲಾಗಿ ಕಳೆಯುವುದಷ್ಟೇ ಸದ್ಯದ ಸುಖವಾಗಿತ್ತು.

